ರಾಜ್ಯದಲ್ಲಿ ವಿಶ್ವಬ್ಯಾಂಕ್ ನೆರವು ಮತ್ತು ಕ್ಷೀರಧಾರೆ ಯೋಜನೆಯಡಿಯಲ್ಲಿ ಸ್ಥಾಪಿಸಿರುವ ಸಂಸ್ಕರಣಾ ಸೌಲಭ್ಯಗಳು.

2286 (3108) ಶ್ರೀ ಶ್ರೀನಾವಾಸಗೌಡ ಕುದವನಹಳ್ಳಿ ಕೆ. (ಕೋಲಾರ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ವಿಶ್ವಬ್ಯಾಂಕಿನ ನೆರವು ಮತ್ತು ಕ್ಷೀರಧಾರೆ ಯೋಜನೆಯಡಿಯಲ್ಲಿ ಸ್ಥಾಪನೆಗೊಂಡಿರುವ ಸಂಸ್ಕರಣ ಸೌಲಭ್ಯಗಳನ್ನು ಆಯಾ ಜಿಲ್ಲಾ ಹಾಲು ಒಕ್ಕೂಟಗಳಿಗೆ ಹಸ್ತಾಂತರಗೊಳಿಸಲಾಗಿದೆಯೇ?

ಆ) ಯಲಹಂಕ ಮದರ್ ಡೇರಿಯನ್ನು ಕೋಲಾರ ಹಾಲು ಒಕ್ಕೂಟಕ್ಕೆ ಹಸ್ತಾಂತರಿಸುವ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿದೆಯೇ?

ಇ) ಮನವಿ ಬಂದಿದ್ದಲ್ಲಿ ಅದರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಈ) ಮದರ್ ಡೇರಿಯು ಕೋಲಾರ ಹಾಲು ಒಕ್ಕೂಟದಿಂದ ಪಡೆಯುವ ಹಾಲಿಗೆ ಅಂತ ಡೇರಿ ದರವನ್ನು ಯಾವುದೇ ಶಾಶ್ವತ ನೆಲೆ ಇಲ್ಲದೆ ದರ ನಿಗಧಿಪಡಿಸಿ ಲಾಭಗಳಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ರಾಜ್ಯದಲ್ಲಿ ವಿಶ್ವಬ್ಯಾಂಕ್ ಮತ್ತು ಕ್ಷೀರಧಾರೆ ಯೋಜನೆಯಡಿಯಲ್ಲಿ ಒಕ್ಕೂಟಗಳಿಗಾಗಿ ಸ್ಥಾಪನೆಗೊಂಡಿರುವ ಸಂಸ್ಕರಣಾ ಸೌಲಭ್ಯಗಳನ್ನು ಆಯಾ ಜಿಲ್ಲಾ ಹಾಲೂ ಒಕ್ಕೂಟಗಳಿಗೆ ಹಸ್ತಾಂತರಗೊಳಿಸಲಾಗಿದೆ

ಆ) ಹೌದು.

ಇ) ಮದರ್ ಡೇರಿಯ ಸ್ಥಾಪನೆ ಮೂಲ ಉದ್ದೇಶ ನೆರೆ ಜಿಲ್ಲೆಗಳಾದ ಬೆಂಗಳೂರು, ಕೋಲಾರ, ಮೈಸೂರು, ಮಂಡ್ಯ, ಹಾಸನ ಮತ್ತು ತುಮಕೂರು ಒಕ್ಕೂಟಗಳಿಂದ ಹೆಚ್ಚುವರಿ ಹಾಲನ್ನು ಪಡೆದು ಸಂಸ್ಕರಿಸಿ ಮಾರಾಟ ಮಾಡುವುದಾಗಿರುತ್ತದೆ. ಆದುದರಿಂದ ಮದರ್ ಡೇರಿಯನ್ನು ಕೋಲಾರ ಹಾಲು ಒಕ್ಕೂಟಕ್ಕೆ ಹಸ್ತಾಂತರಿಸುವ ಉದ್ದೇಶವಿರುವುದಿಲ್ಲ.

ಈ) ಅಂತರ ಡೈರಿ ದರ ನಿಗಧಿ ಮಾಡಲು ಕರ್ನಾಟಕ ಹಾಲು ಮಹಾ ಮಂಡಳಿಯು ಒಕ್ಕೂಟಗಳ ಸಹಮತದಿಂದ ಒಪ್ಪಿರುವ ಒಂದು ಸೂತ್ರವನ್ನು ಅಳವಡಿಸಿ ನಿಗಧಿ ಮಾಡಲಾಗುತ್ತಿದೆ. ಅದರಂತೆ ಹೆಚ್ಚುವರಿ ಹಾಲಿನ ಒಕ್ಕೂಟಗಳ ಹಾಲು ಶೇಖರಣಾ ವೆಚ್ಚ ಹಾಗೂ ಹಾಲು ಪಡೆಯುವ ಡೇರಿಗಳ ಹಾಲು ಸಂಸ್ಕರಣೆ ಹಾಗೂ ವಿತರಣೆಗೆ ತಗಲುವ ವೆಚ್ಚಗಳನ್ನು ಗಮನದಲ್ಲಿಟ್ಟುಕೊಂಡು ವೈಜ್ಞಾನಿಕ ರೀತಿಯಲ್ಲಿ ಎಲ್ಲಾ ಜಿಲ್ಲಾ ಹಾಲು ಒಕ್ಕೂಟಗಳ ಕಾರ್ಯ ನಿರ್ವಾಹಕ ನಿರ್ದೇಶಕರುಗಳು ಪ್ರತಿ ತಿಂಗಳೂ ಭಾಗವಹಿಸುವ ಕಾರ್ಯ ನಿರೂಪಣಾ ಸಮಿತಿ ಸಭೆಯಲ್ಲಿ ನಿರ್ಧರಿಸಿ ಅಂತರ ಡೇರಿ ದರ ನೀಗಧಿ ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.